ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು –01

**ಓದಲಾಗಿದೆ:-**

ಬೆವಿಕಂ ನಿರ್ದೇಶಕ ಮಂಡಳಿ ಸಭೆ ಠರಾವು ಸಂಖ್ಯೆ: 82/20 ದಿನಾಂಕ: 11.05.2017

**ಪ್ರಸ್ತಾವನೆ:**

ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯದ ರಾಮನಗರ ಮತ್ತು ಮಾಗಡಿ ವ್ಯಾಪ್ತಿಯಲ್ಲಿನ ಗ್ರಾಹಕರಿಗೆ ಒದಗಿಸಲಾಗುತ್ತಿರುವ ಸೇವೆಯನ್ನು ಮತ್ತಷ್ಟು ಉತ್ತಮಗೊಳಿಸುವ ಹಾಗೂ ಆಡಳಿತದ ಹಿತ ದೃಷ್ಟಿಯಿಂದ ರಾಮನಗರ ವಿಭಾಗವನ್ನು ಪುನರ್‌ರಚಿಸಿ ಅಧಿಕವಾಗಿ ಒಂದು ವಿಭಾಗವನ್ನು ತೆರೆಯಲು ದಿನಾಂಕ: 11.05.2017 ರಂದು ನಡೆದ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಸದರಿ ನಿರ್ಣಯದಂತೆ ಅಧಿಕವಾಗಿ ಮಾಗಡಿ ವಿಭಾಗವನ್ನು ರಚಿಸಲು ಹಾಗೂ ಅಗತ್ಯ ಸಿಬ್ಬಂದಿಯನ್ನು ಮಂಜೂರು ಮಾಡಲು ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಬೆವಿಕಂ/ಬಿಸಿ31/73/2017-18** /139 **ದಿನಾಂಕ:** 16 JUN 2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಾನುಸಾರ, ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ ವ್ಯಾಪ್ತಿಯಲ್ಲಿನ ರಾಮನಗರ ಕಾರ್ಯ ಮತ್ತು ಪಾಲನಾ ವಿಭಾಗವನ್ನು ಕೆಳಕಂಡಂತೆ ಪುನರ್‌ರಚಿಸಲು ಆದೇಶಿಸಲಾಗಿದೆ:-

1. ರಾಮನಗರ ಕಾರ್ಯ ಮತ್ತು ಪಾಲನಾ ವಿಭಾಗವನ್ನು ವಿಭಜಿಸುವ ಮೂಲಕ ನೂತನವಾಗಿ ಮತ್ತೊಂದು ಕಾರ್ಯ ಮತ್ತು ಪಾಲನಾ ವಿಭಾಗವನ್ನು ರಚಿಸಲಾಗಿದೆ. ನೂತನವಾಗಿ ರಚಿಸಲಾಗಿರುವ ವಿಭಾಗವನ್ನು **'ಮಾಗಡಿ ಕಾರ್ಯ ಮತ್ತು ಪಾಲನಾ ವಿಭಾಗ'**ವೆಂದು ಹೆಸರಿಸಲಾಗಿದೆ.
2. ರಾಮನಗರ ಕಾರ್ಯ ಮತ್ತು ಪಾಲನಾ ವಿಭಾಗದ ಪುನರ್‌ರಚನೆ ನಂತರ ರಾಮನಗರ ಮತ್ತು ಮಾಗಡಿ ವಿಭಾಗ ವ್ಯಾಪ್ತಿಗೊಳಪಡುವ ಕಾರ್ಯ ಮತ್ತು ಪಾಲನಾ ಉಪ ವಿಭಾಗಗಳ ವಿವರ ಕೆಳಗಿನಂತಿವೆ:-

| ರಾಮನಗರ ವಿಭಾಗ | ಮಾಗಡಿ ವಿಭಾಗ |
|---|---|
| 1.ರಾಮನಗರ ನಗರ ಉಪ ವಿಭಾಗ | 1. ಮಾಗಡಿ ಉಪ ವಿಭಾಗ |
| 2.ರಾಮನಗರ ಗ್ರಾಮೀಣ ಉಪ ವಿಭಾಗ | 2. ತಾವರೆಕೆರೆ ಉಪ ವಿಭಾಗ |
| 3.ಚನ್ನಪಟ್ಟಣ ನಗರ ಉಪ ವಿಭಾಗ | 3. ಕುದೂರು ಉಪ ವಿಭಾಗ |
| 4.ಚನ್ನಪಟ್ಟಣ ಗ್ರಾಮೀಣ ಉಪ ವಿಭಾಗ | - |
| 5.ಬಿಡದಿ ಉಪ ವಿಭಾಗ | - |

**ಟಿಪ್ಪಣಿ:-** ತಾವರೆಕೆರೆ ಉಪ ವಿಭಾಗವನ್ನು ನೆಲಮಂಗಲ ವಿಭಾಗದ ಆಡಳಿತ ನಿಯಂತ್ರಣದಿಂದ ಹಿಂಪಡೆದು ನೂತನವಾಗಿ ರಚಿಸಲಾಗಿರುವ ಮಾಗಡಿ ವಿಭಾಗದ ಆಡಳಿತ ನಿಯಂತ್ರಣಕ್ಕೊಳಪಡಿಸಲಾಗಿದೆ.

3. ನೂತನವಾಗಿ ರಚಿಸಲಾಗಿರುವ **'ಮಾಗಡಿ ಕಾರ್ಯ ಮತ್ತು ಪಾಲನಾ ವಿಭಾಗ'**ಕ್ಕೆ ವಿವಿಧ ಪದವೃಂದದ ಒಟ್ಟು 51 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ವಿವರಗಳನ್ನು **'ಅನುಬಂಧ'**ದಲ್ಲಿ ವಿವರಿಸಲಾಗಿದೆ.

4. ನೂತನವಾಗಿ ರಚಿಸಲಾಗಿರುವ **'ಮಾಗಡಿ ಕಾರ್ಯ ಮತ್ತು ಪಾಲನಾ ವಿಭಾಗ'**ವನ್ನು ಅಧೀಕ್ಷಕ ಇಂಜಿನಿಯರ್(ವಿ), ರಾಮನಗರ ವೃತ್ತ ರವರ ಆಡಳಿತ ನಿಯಂತ್ರಣಕ್ಕೊಳಪಡಿಸಲಾಗಿದೆ.

5. ನೂತನವಾಗಿ ರಚಿಸಲಾಗಿರುವ ವಿಭಾಗ ಕಛೇರಿಯ ದೈನಂದಿನ ನಿರ್ವಹಣೆಗಾಗಿ ಕಂಪ್ಯೂಟರ್ ಅಗತ್ಯತೆಯನ್ನು ಪರಿಶೀಲಿಸಿ ಒದಗಿಸುವಲ್ಲಿ ಪ್ರಧಾನ ವ್ಯವಸ್ಥಾಪಕರು(ಐಸಿಟಿ ಮತ್ತು ಎಂಐಎಸ್), ಕಂಪನಿ ಕಾರ್ಯಾಲಯ ರವರು ಸೂಕ್ತ ಕ್ರಮ ತೆಗೆದುಕೊಳ್ಳುವುದು.

6. ಕಂಪನಿಯಲ್ಲಿ ಹಾಲಿ ಚಾಲ್ತಿಯಲ್ಲಿರುವ ನಿಯಮಗಳನುಸಾರ ಈ ಆದೇಶದಲ್ಲಿ ರಚಿಸಲಾದ ಹೊಸ ಕಛೇರಿಗೆ ದಿನನಿತ್ಯದ ಕೆಲಸಗಳ ನಿರ್ವಹಣೆಗಾಗಿ ಬಾಡಿಗೆ ವಾಹನ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

7. ಈ ಆದೇಶದಲ್ಲಿ ನೂತನವಾಗಿ ರಚಿಸಲಾಗಿರುವ ವಿಭಾಗ ಕಛೇರಿ ಕಾರ್ಯಾರಂಭಿಸಲು ಸಂಬಂಧಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಹದಿನೈದು ದಿನಗಳೊಳಗಾಗಿ ಸೂಕ್ತ ಕ್ರಮ ಕೈಗೊಳ್ಳುವುದು.

8. ನೂತನವಾಗಿ ರಚಿಸಲಾಗಿರುವ ವಿಭಾಗ ಕಛೇರಿ ಪುನರಾರಂಭಿಸಲು ಸೂಕ್ತ ಕಟ್ಟಡ ವ್ಯವಸ್ಥೆಯನ್ನು ಒದಗಿಸಲು ಸಂಬಂಧಿಸಿದ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ) ರವರು ಕ್ರಮ ಕೈಗೊಳ್ಳುವುದು.

9. ಹೊಸದಾಗಿ ರಚಿಸಲಾಗಿರುವ ವಿಭಾಗ ಕಛೇರಿಯ ಭೌಗೋಳಿಕ ವ್ಯಾಪ್ತಿಗೆ ಒಳಪಡುವ ಪ್ರದೇಶ, ಫೀಡರ್‌ಗಳು, ಪರಿವರ್ತಕಗಳು ಹಾಗೂ ಇತರೆ ವಿವರಗಳನ್ನೊಳಗೊಂಡಂತೆ ಪ್ರತ್ಯೇಕ ಆದೇಶವನ್ನು ಸಂಬಂಧಿಸಿದ ವಲಯದ ಮುಖ್ಯ ಇಂಜಿನಿಯರ್(ವಿ) ರವರು ಹೊರಡಿಸುವುದು ಹಾಗೂ ಹೊಸದಾಗಿ ರಚಿಸಲಾದ ಕಛೇರಿಯನ್ನು ಕಾರ್ಯಗತಗೊಳಿಸಿ ಅನುಸರಣಾ ವರದಿಯನ್ನು ಕಂಪನಿ ಕಾರ್ಯಾಲಯಕ್ಕೆ ಸಲ್ಲಿಸುವುದು.

ಈ ಆದೇಶವು ಕೂಡಲೇ ಜಾರಿಗೆ ಬರುತ್ತದೆ.

**ಆದೇಶದ ಮೇರೆಗೆ,**

**ಪ್ರಧಾನ ವ್ಯವಸ್ಥಾಪಕರು(ಆ. ಮತ್ತು ಮಾ.ಸಂ.),**
**ಅಧಿಕ ಪ್ರಭಾರ**
**ಬೆ.ವಿ.ಕಂ., ಬೆಂಗಳೂರು.**

**ಪ್ರತಿಗಳು:-**

1. ಕಂಪನಿ ಕಾರ್ಯದರ್ಶಿ, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಬೆವಿಕಂ.
4. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ, ಬೆವಿಕಂ.
6. ಅಧೀಕ್ಷಕ ಇಂಜಿನಿಯರ್(ವಿ), ಕಂಪ್ಯೂಟರ್ ಶಾಖೆ, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-9.

--3

7. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಬೆವಿಕಂ.
8. ಎಲ್ಲಾ ಅಧಿಕಾರಿಗಳು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
9. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ ವೃತ್ತ, ಬೆವಿಕಂ.
10. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಡಳಿತ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
11. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ವಿಭಾಗ, ಬೆವಿಕಂ.
12. ಎಲ್ಲಾ ಲೆಕ್ಕಾಧಿಕಾರಿ ಕಾರ್ಯ ಮತ್ತು ಪಾಲನೆ/(ಅಂ.ಪ), ಬೆವಿಕಂ.
13. ವ್ಯವಸ್ಥಾಪಕರು, ಸಿಬ್ಬಂದಿ-1 ಮತ್ತು 2 ಸ್ಥಿರಾಸ್ತಿ, ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
14. ಆಪ್ತ ಕಾರ್ಯದರ್ಶಿಗಳು: ನಿರ್ದೇಶಕರು(ಆ ಮತ್ತು ಮಾ.ಸಂ.), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
15. ಆಪ್ತ ಕಾರ್ಯದರ್ಶಿಗಳು : ವ್ಯ.ನಿ/ನಿ(ತಾಂ.)/ನಿ(ಹ), ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
16. ಮುಖ್ಯ ಕಡತ.

**ಪ್ರತಿಗಳು ಮಾಹಿತಿಗಾಗಿ:-**

1. ಶ್ರೀ. ಪಿ.ಜಿ.ಅಮ್ಮಿನಭಾವಿ, ಅಧ್ಯಕ್ಷರು, ಕ.ವಿ.ಪ್ರ.ನಿ.ನಿ ನೌಕರರ ಸಂಘ, ಅನಂದರಾವ್ ವೃತ್ತ, ಬೆಂಗಳೂರು.
2. ಶ್ರೀ. ಎ.ಎನ್. ಜಯರಾಜ್, ಅಧ್ಯಕ್ಷರು, ಕೆ.ಇ.ಬಿ. ಇಂಜಿನಿಯರುಗಳ ಸಂಘ, ಅನಂದರಾವ್ ವೃತ್ತ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ ನೌಕರರ ಸಂಘ/ಕ.ವಿ.ಮಂ ಇಂಜಿನಿಯರುಗಳ ಸಂಘ/ಕ.ವಿ.ಪ್ರ.ನಿ.ನಿ., ಲೆಕ್ಕಾಧಿಕಾರಿಗಳ ಸಂಘ/ಕ.ವಿ.ಪ್ರ.ನಿ.ನಿ., ಪ.ಜಾತಿ ಮತ್ತು ಪ.ಪಂಗಡಗಳ ಕಲ್ಯಾಣ ಸಂಸ್ಥೆ/ಡಿಪ್ಲೊಮೊ ಇಂಜಿನಿಯರುಗಳ ಸಂಘ/ ಕ.ವಿ.ಪ್ರ.ನಿ.ನಿ/ಎಸ್ಕಾಂ ಪ.ಜಾತಿ ಮತ್ತು ಪ.ಪಂಗಡಗಳ ಅಧಿಕಾರಿಗಳ ಸಂಘ, ಬೆಂಗಳೂರು ರವರುಗಳ ಮಾಹಿತಿಗಾಗಿ.

ಅನುಬಂಧ

ಆದೇಶ ಸಂಖ್ಯೆ/ಬೆವಿಕಂ/ಬಿಸಿ31/73/2017-18/139 ದಿನಾಂಕ: 16 JUN 2017

| ನೂತನವಾಗಿ ರಚಿಸಲಾಗಿರುವ ಮಾಗಡಿ ವಿಭಾಗೀಯ ಕಛೇರಿಗೆ ಮಂಜೂರಾದ ಹುದ್ದೆಗಳ ವಿವರಗಳು | | |
|---|---|---|
| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ |
| 1 | ಕಾರ್ಯನಿರ್ವಾಹಕ ಇಂಜಿನಿಯರ್(ವಿ) | 1 |
| 2 | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) | 1 |
| 3 | ಲೆಕ್ಕಾಧಿಕಾರಿ | 1 |
| 4 | ಲೆಕ್ಕಾಧಿಕಾರಿ(ಆಂಪ) | 1 |
| 5 | ಸಹಾಯಕ ಇಂಜಿನಿಯರ್(ವಿ)/(ತಾಂತ್ರಿಕ) | 1 |
| 6 | ಸಹಾಯಕ ಲೆಕ್ಕಾಧಿಕಾರಿ | 1 |
| 7 | ಸಹಾಯಕ ಲೆಕ್ಕಾಧಿಕಾರಿ(ಆಂ.ಪ) | 1 |
| 8 | ಕಿರಿಯ ಇಂಜಿನಿಯರ್(ವಿ)/(ತಾಂತ್ರಿಕ) | 3 |
| 9 | ಹಿರಿಯ ಸಹಾಯಕ | 5 |
| 10 | ಸಹಾಯಕ | 6 |
| 11 | ಕಿರಿಯ ಸಹಾಯಕ | 6 |
| 12 | ಉಗ್ರಾಣ ಪಾಲಕ ದರ್ಜೆ-II | 1 |
| 13 | ಸಹಾಯಕ ಉಗ್ರಾಣ ಪಾಲಕ | 1 |
| 14 | ಉಗ್ರಾಣ ಮೇಸ್ತ್ರಿ ದರ್ಜೆ-I | 1 |
| 15 | ಉಗ್ರಾಣ ಮೇಸ್ತ್ರಿ ದರ್ಜೆ-II | 1 |
| 16 | ಉಗ್ರಾಣ ಪರಿಚಾರಕ ದರ್ಜೆ-I | 2 |
| 17 | ಉಗ್ರಾಣ ಪರಿಚಾರಕ ದರ್ಜೆ-II | 4 |
| 18 | ಉಗ್ರಾಣ ಕಾವಲುಗಾರ | 3 |
| 19 | ಧಫ್ತರಿ | 3 |
| 20 | ಕಛೇರಿ ಪರಿಚಾರಕ ದರ್ಜೆ-I | 1 |
| 21 | ಕಛೇರಿ ಪರಿಚಾರಕ ದರ್ಜೆ-II | 4 |
| 22 | ಮಾಲಿ ದರ್ಜೆ-II | 1 |
| 23 | ಶುಚಿಗಾರರು | 2 |
| | **ಒಟ್ಟು ಹುದ್ದೆಗಳ ಸಂಖ್ಯೆ** | **51** |

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಅಧಿಕ ಪ್ರಭಾರ
ಬೆ.ವಿ.ಕಂ., ಬೆಂಗಳೂರು